ಕೆಲಸ ಮಾಡುತ್ತಿದ್ದರೂ ಈ ಸೀತೆಯನ್ನು ಬಿಟ್ಟರೆ ನನಗೆ ಬೇರೆ ಯಾರೂ ಆತ್ಮೀಯ ಗೆಳತಿಯರಿರಲಿಲ್ಲ. ಸೀತೆ ನಮ್ಮೂರಿನವಳೇ. ಅವಳದ್ದೊಂದು ಕತೆ. ಅವಳು ಮತ್ತು ನಾನು ನಮ್ಮೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಸಹಪಾಠಿಗಳು. ಹತ್ತನೆಯ ತರಗತಿಯಲ್ಲಿ ಅವಳು ಇಂಗ್ಲಿಷಿನಲ್ಲಿ ಮತ್ತು ಗಣಿತದಲ್ಲಿ ಫೇಲಾದಳು. ನಾನು ಕನ್ನಡದಲ್ಲಿ ನೂರಿಪ್ಪತ್ತು ಅಂಕ ಪಡೆದಿದ್ದೆ. ಇಂಗ್ಲಿಷಿನಲ್ಲಿ ಹೇಗೋ ನಲವತ್ತು ಅಂಕ ಗಳಿಸಿ ಒಟ್ಟಾರೆ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದೆ. ಸೀತೆಯ ತಂದೆತಾಯಿಯರು ಕೂಡ ನಮ್ಮಂತೆಯೇ ಬಡವರು. ಅವರ ಮನೆ ನಮ್ಮ ಮನೆಯ ಬೀದಿಯಲ್ಲಿಯೇ ಕೊನೆಯ ಮನೆ. ಅವರ ತಂದೆ ತಳ್ಳುವ ಗಾಡಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದರು. ತಾಯಿ ದಿನವೂ ಮಾರುಕಟ್ಟೆಯಿಂದ ಬಿಡಿ ಹೂವುಗಳನ್ನು ತಂದು ಕಟ್ಟಿ ಮಾಲೆ ಮಾಡಿ ಮಾರುತ್ತಿದ್ದರು. ಸೀತೆಗೆ ಮೂವರು ಅಕ್ಕಂದಿರು. ಅವರೆಲ್ಲರ ಮದುವೆಯಾಗಿತ್ತು. ಇವಳು ಹತ್ತನೆಯ ತರಗತಿಯಲ್ಲಿ ಫೇಲಾದದ್ದನ್ನೇ ನೆಪ ಮಾಡಿಕೊಂಡು ಅವರ ತಾಯಿ ಬೆಂಗಳೂರಿನ ಯಾವುದೋ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ತನ್ನ ತಮ್ಮನಿಗೆ ಮದುವೆ ಮಾಡಿದರು. ಆ ಚಿಕ್ಕವಯಸ್ಸಿನಲ್ಲಿ ಇವಳಿಗೆ ಮದುವೆ ಇಷ್ಟವಿರಲಿಲ್ಲ. ಆದರೂ ಹೇಗೋ ಗಂಡನೊಂದಿಗೆ ಹೊಂದಿಕೊಂಡು ಸಂಸಾರ ಮಾಡುತ್ತಿದ್ದಳು. ಬೆಂಗಳೂರು ನಗರದಲ್ಲಿ ಅವಳ ಗಂಡನೊಬ್ಬನ ದುಡಿಮೆ ಯಾತಕ್ಕೂ ಸಾಲುತ್ತಿರಲಿಲ್ಲವಂತೆ. ಅದಕ್ಕೆ ಇವಳು ಕೆಂಗೇರಿಯಲ್ಲಿ ಅವರ ಬಾಡಿಗೆ ಮನೆಗೆ ಹತ್ತಿರವಾಗಿದ್ದ ಈ ಗಾರ್ಮೆಂಟ್ಸ್ ಫ್ಯಾಕ್ಟರಿಗೆ ಕೆಲಸಕ್ಕೆ ಸೇರಿದ್ದಳು. ಮಗುವಾದರೆ ಕೆಲಸ ಮಾಡುವುದೂ ಕಷ್ಟವಾಗುತ್ತದೆಯೆಂಬ ಕಾರಣದಿಂದ ಮಕ್ಕಳಾಗದಂತೆ ಕಾಪರ್‌ಟಿ ಹಾಕಿಸಿಕೊಂಡಿದ್ದಳು. ಅವಳು ಅವಳ ಸಂಸಾರದ ಯಾವ ಒಂದೂ ಗುಟ್ಟುಗಳನ್ನು, ಅದು ಸುಖದ ವಿಷಯವೇ ಇರಲಿ, ದುಃಖದ ವಿಷಯವೇ ಇರಲಿ ನನ್ನಿಂದ ಮುಚ್ಚಿಡುತ್ತಿರಲಿಲ್ಲ. 'ನಿನ್ನ ಹತ್ತಿರ ಹೇಳಿಕೊಂಡರೆ ಒಂದು ಸ್ವಲ್ಪ ಸಮಾಧಾನವಾಗುತ್ತದೆ ಕಣೇ..' ಎಂದು ಎಲ್ಲವನ್ನೂ ಹೇಳಿಕೊಳ್ಳುತ್ತಿದ್ದಳು.

ಅವಳು ನನ್ನಷ್ಟೇ ಕೆಂಪಗಿದ್ದರೂ ನನಗಿಂತ ಒಂದು ಅಡಿಗಳಷ್ಟು ಕುಳ್ಳಿಯಾಗಿದ್ದಳು. ಆದರೆ ಅವಳ ಎದೆ ಮತ್ತು ನಿತಂಬಗಳು ದೊಡ್ಡದಾಗಿದ್ದವು. ಅದೊಂದು ದಿನ ಫ್ಯಾಕ್ಟರಿಗೆ ಬಂದಾಗ ಅವಳ ಎಡಕೆನ್ನೆಯಲ್ಲಿ ಎಂತಹುದೋ ಗುರುತಾಗಿ ಕೆನ್ನೆ ತುಸುವೇ ಊದಿಕೊಂಡಿತ್ತು. ಅದನ್ನು ಗಮನಿಸಿ ನಾನು ತುಸು ಕುತೂಹಲದಿಂದಲೇ ಏನಾಯಿತೆಂದು ಕೇಳಿದೆ. 'ನಮ್ಮ ಮಾವ ಕಚ್ಚಿಬಿಟ್ಟ ಕಣೇ..' ಎಂದು ಯಾವುದೇ ಸಂಕೋಚವಿಲ್ಲದೇ ಹೇಳಿದ್ದನ್ನು ಕಂಡು ನನಗೆ ಒಳಗೊಳಗೆ ಒಂಥರಾ ಖುಷಿಯಾಗಿತ್ತು. ಇನ್ನೊಂದು ದಿನ ಅರ್ಧದಿನ ತಡವಾಗಿ ಫ್ಯಾಕ್ಟರಿಗೆ ಬಂದವಳೇ 'ಲೇ ಹೇಮಾ.. ಈವತ್ತು ನಮ್ಮ ಮಾವನಿಗೆ ಏನಾಗಿತ್ತೋ ರೋಗ.. ಬೆಳಿಗ್ಗೆ ಬೆಳಿಗ್ಗೇನೆ ಹಿಡಕಂಡು ಮೈಯೆಲ್ಲಾ ಹಿಂಡಿ ಹಿಪ್ಪೇಕಾಯಿ ಮಾಡಿಬಿಟ್ಟ ಕಣೇ..' ಎಂದು ತುಸು ಬೇಸರದಿಂದಲೇ ಹೇಳಿದ್ದಳು. ಅದನ್ನು ಕೇಳಿ ಆಗ ನನಗೆ ಮೈಯ್ಯೆಲ್ಲಾ ಬಿಸಿಯೇರಿದಂತಾಗಿತ್ತು.

ಇಷ್ಟೆಲ್ಲಾ ಗುಟ್ಟುಗಳನ್ನು ಅವಳು ನನ್ನ ಬಳಿ ಹೇಳಿಕೊಂಡಿದ್ದರೂ ಅಂದು ನಾನು ನನಗಾಗುತ್ತಿದ್ದ ಆನಂದದ ನಿಜವಾದ ಕಾರಣವೇನೆಂದು ಅವಳಿಗೆ ಹೇಳಲಿಲ್ಲ. ಮುಂದೆಯೂ ನಡೆದದ್ದನ್ನು ಅವಳ ಬಳಿಯಲ್ಲಿಯೇ ಅಲ್ಲದೆ ಯಾರ ಬಳಿಯಲ್ಲಿಯೂ ಹೇಳಲಿಲ್ಲ. ಈ ಸೀತೆಯೇ ನನಗೆ ಆ ಗಾರ್ಮೆಂಟ್ಸ್ ಫ್ಯಾಕ್ಟರಿಯ ದಾರಿ ತೋರಿಸಿದ್ದು.

ನಾನು ಹತ್ತನೆಯ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದಾಗ ನನ್ನ ಅಪ್ಪನಿಗೆ ತುಂಬಾ ಖುಷಿಯಾಗಿತ್ತು. ಅವರಿಗೆ ನನ್ನ ಮಗಳನ್ನು ಡಾಕ್ಟರ್ ಅಥವಾ ಇಂಜಿನಿಯರ್ ಮಾಡಬೇಕು ಎಂಬ ದೊಡ್ಡ ಕನಸುಗಳೇನೂ ಇರಲಿಲ್ಲ. ನನ್ನ ಮಗಳನ್ನು ಹೇಗಾದರೂ ಮಾಡಿ ಗ್ರಾಜ್ಯುಯೇಟ್ ಮಾಡಬೇಕು ಎಂಬುದು ಮಾತ್ರ ಅವರ ಅಭಿಲಾಷೆಯಾಗಿತ್ತು. ನಾನು ಸರ್ಕಾರಿ ಪಿ.ಯೂ. ಕಾಲೇಜಿನಲ್ಲಿ ಕಾಮರ್ಸ್ ವಿಭಾಗಕ್ಕೆ ಸೇರಿಕೊಂಡೆ. ಆದರೆ ನನ್ನ ಅಪ್ಪನ ಆಸೆ ಕೊನೆಗೂ ಕೈಗೂಡಲಿಲ್ಲ. ಆಮೇಲೆ ನಡೆದದ್ದೇ ಬೇರೆ. ವಿಧಿಯಾಟಕ್ಕೆ ಸಿಲುಕಿದ ನಮ್ಮ ಕುಟುಂಬ ಸೂತ್ರ ಹರಿದ ಗಾಳಿಪಟದಂತೆ ಗೋತಾ ಹೊಡೆಯತೊಡಗಿತು.

ನಾನು ಚಿಕ್ಕವಳಿದ್ದಾಗ ಅಪ್ಪ ಗಂಡಸರ ಬಟ್ಟೆಗಳನ್ನೇ ಹೊಲಿಯುತ್ತಿದ್ದರು. ನಾನು, ಅಪ್ಪ, ಅಮ್ಮ ಮೂವರಿದ್ದ ನಮ್ಮ ಕುಟುಂಬಕ್ಕೆ ಅವರ ದುಡಿಮೆ ಸಾಕಾಗುತಿತ್ತು. ನನ್ನ ಅಮ್ಮನಿಗೂ ಹೊಟ್ಟೆಬಟ್ಟೆಗೆ ಬೇರೆಯವರ ಬಳಿ ಕೈಚಾಚದಿದ್ದರೆ ಸಾಕೆಂಬ ಸ್ವಾಭಿಮಾನವನ್ನು ಬಿಟ್ಟು ಬೇರೆಯ ಆಸೆಗಳಿರಲಿಲ್ಲ. ಪೇಟೆಬೀದಿಯಲ್ಲಿ ನಮ್ಮದು ಅಂಗಡಿಯಿತ್ತು. ಅಪ್ಪ ಬೆಳಗ್ಗೆ ಒಂಬತ್ತು ಗಂಟೆಗೆ ಹೋಗಿ ಅಂಗಡಿ ತೆರೆಯುತ್ತಿದ್ದರು. ನಾನು ಶಾಲೆಗೆ ಹೋದ ನಂತರ ಮನೆಯ ಬೀಗ ಹಾಕಿಕೊಂಡು ಅಮ್ಮನೂ ಅಲ್ಲಿಗೆ ಹೋಗಿ ಅಪ್ಪ ಹೊಲಿದಿದ್ದ ಬಟ್ಟೆಗಳಿಗೆ ಗುಂಡಿ ಹಾಕುವುದು, ಎಮ್ಮಿಂಗ್ ಮಾಡುವುದು, ಖಾಜಾ ಮಾಡುವುದು ಮಾಡಿಕೊಂಡು ಅಪ್ಪನಿಗೆ ನೆರವಾಗುತ್ತಿದ್ದಳು. ಒಟ್ಟಿನಲ್ಲಿ ನನ್ನ ಅಪ್ಪ ಮತ್ತು ಅಮ್ಮ ದಿನಪೂರ್ತಿ ಒಟ್ಟಿಗೇ ಇರುತ್ತಿದ್ದರು. ಅಪ್ಪ ಕಡಿಮೆ ಮಾತಿನವನು. ಅಮ್ಮನೇ ತುಸು ವಾಚಾಳಿ. ಅಪ್ಪನ ಮಗುವಿನಂತಹ  ಉದಾರಿ ಮನಸ್ಸಿನಿಂದ ಕೆಲವೊಂದು ಬಾರಿ ಆಗುತ್ತಿದ್ದ ತಪ್ಪುಗಳನ್ನು ಅಮ್ಮನೇ ಸರಿಪಡಿಸುತಿದ್ದಳು. ಅಪ್ಪ ಎಂದಾದರೊಮ್ಮೆ ಕುಡಿದು ಮನೆಗೆ ಬರುತ್ತಿದ್ದರು. ಅಂತಹ ಸಮಯದಲ್ಲಿ ಅಮ್ಮ ಅಪ್ಪನ ಮೇಲೆ ಮೆಲುದನಿಯಲ್ಲಿಯೇ ಯದ್ವಾತದ್ವಾ ರೇಗಾಡುತ್ತಿದ್ದಳು. ಅಮ್ಮ ಏನೇ ಅಂದರೂ ಅಪ್ಪ ಬಾಯಿ ಬಿಡುತ್ತಿರಲಿಲ್ಲ. ಕೆಲವೊಮ್ಮೆ ಸಣ್ಣ ಪುಟ್ಟ ವಿಷಯಗಳಿಗೆ ಅಮ್ಮ ಅಪ್ಪನ ಮೇಲೆ ಜಗಳ ಮಾಡಿ ರೇಗಾಡಿದರೂ ಅವಳು ಎಂದೂ ತನ್ನ ದನಿಯನ್ನು ಎತ್ತರಿಸಿಕೊಂಡು ಮಾತನಾಡುತ್ತಿರಲಿಲ್ಲ. ಅದಾದ ಮರುಕ್ಷಣದಲ್ಲಿಯೇ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಅಪ್ಪನೊಂದಿಗೆ ರಾಜಿಯಾಗುತ್ತಿದ್ದಳು. ಅವರಿಬ್ಬರು ಮನೆಯಲ್ಲಿಯೇ ಆಗಲಿ, ಅಂಗಡಿಯಲ್ಲಿಯೇ ಆಗಲಿ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದರು.

ಹೀಗಿರುವಾಗ ಕ್ರಮೇಣ ಮಾರುಕಟ್ಟೆಯಲ್ಲಿ ಗಂಡಸರ ರೆಡಿಮೇಡ್ ಬಟ್ಟೆಗಳ ಅಬ್ಬರ ಶುರುವಾಗಿ ಅಪ್ಪನ ವೃತ್ತಿಯಲ್ಲಿ ಏರಿಳಿತಗಳು ಪ್ರಾರಂಭವಾದವು. ಅದನ್ನು ಗ್ರಹಿಸಿದ ಅಪ್ಪ ಹೆಂಗಸರ ಬಟ್ಟೆಗಳನ್ನೂ ಹೊಲಿಯಲು ಶುರು ಮಾಡಿದರು. ಅದರಿಂದಾಗಿ ಮತ್ತೆ ಅಪ್ಪನ ವೃತ್ತಿಯಲ್ಲಿ ಸ್ಥಿರತೆ ಸಾಧಿಸುವುದು ಸಾಧ್ಯವಾಯಿತು. ನನ್ನ ರವಿಕೆ, ಲಂಗ ಮತ್ತು ಚೂಡಿದಾರಗಳನ್ನೆಲ್ಲಾ ಅಪ್ಪನೇ ತುಂಬಾ ಶ್ರದ್ಧೆಯಿಂದ ಹೊಲಿದು ಕೊಡುತ್ತಿದ್ದರು. ಅವುಗಳನ್ನು ಧರಿಸಿದಾಗಲೆಲ್ಲಾ ನನಗೆ ಅಪ್ಪನ ಮೇಲಿದ್ದ ಪ್ರೀತಿ ಇನ್ನೂ ಜಾಸ್ತಿಯಾಗುತ್ತಿತ್ತು. ಅಂತಹ ನನ್ನ ಅಪ್ಪ ಒಂದು ದಿನ ದಿಢೀರನೇ ಪಾರ್ಶ್ವವಾಯು ಪೀಡಿತರಾಗಿದ್ದನ್ನು ನನ್ನಿಂದ ಯಾವಾಗ ನೆನಪಿಸಿಕೊಂಡರೂ ಅಗಾಧವಾದ ಯಾತನೆಯಾಗುತ್ತದೆ. ನನ್ನ ಕಣ್ಣುಗಳಿಂದ ಎರಡು ಹನಿ ಕಣ್ಣೀರು ನನಗರಿವಿಲ್ಲದಂತೆಯೇ ಜಾರುತ್ತವೆ. ಇದ್ದುದರಲ್ಲಿಯೇ ಸುಖವಾಗಿದ್ದ ನಮ್ಮ ಕುಟುಂಬದ ನೆಮ್ಮದಿಯನ್ನು ಸಹಿಸಿಕೊಳ್ಳಲಾಗದ ಆ ದೇವರೇ ಹೊಟ್ಟೆಕಿಚ್ಚಿನಿಂದ ನನ್ನ ಅಪ್ಪನನ್ನು ಹಿಡಿದು ಬಡಿದು ಹಾಸಿಗೆಯಿಂದ ಮೇಲೇಳದಂತೆ ಮಾಡಿದನೇನೋ ಎನ್ನುವಷ್ಟು ಸಂಕಟವಾಗುತ್ತದೆ.

ಆಗ ನಾನು ಮೊದಲ ಪಿಯುಸಿಯನ್ನು ಪ್ರಥಮ ದರ್ಜೆಯಲ್ಲಿಯೇ ಪಾಸು ಮಾಡಿಕೊಂಡು ಎರಡನೇ ಪಿಯುಸಿಗೆ ಕಾಲಿಟ್ಟಿದ್ದೆ. ನಮ್ಮ ತರಗತಿಗಳು ಒಂದು ಗಂಟೆಗೆಲ್ಲಾ ಮುಗಿದುಹೋಗುತ್ತಿದ್ದವು. ನಾನು ಕಾಲೇಜು ಮುಗಿದ ಮೇಲೆ ಪ್ರತಿದಿನವೂ ಪೇಟೆ ಬೀದಿಯಲ್ಲಿದ್ದ ನಮ್ಮ ಅಂಗಡಿಗೆ ನಡೆದುಕೊಂಡು ಹೋಗಿ ಅಮ್ಮನಿಂದ ಮನೆಯ ಬೀಗದ ಕೈ ತೆಗದುಕೊಂಡು ಹೋಗುತ್ತಿದ್ದೆ. ಅಮ್ಮ, 'ಸಿಲವಾರದ ಪಾತ್ರೆಯಲ್ಲಿ ಅನ್ನವಿದೆ, ಸ್ಟೋವಿನ  ಮೇಲೆ ಸಾರಿನ ಪಾತ್ರೆಯಿದೆ, ಬಿಸಿ ಮಾಡಿಕೊಂಡು ಊಟ ಮಾಡು.. ಬಟ್ಟಲಿನಲ್ಲಿ ಹುರುಳಿಕಾಯಿ ಪಲ್ಯವಿದೆ ಹಾಕಿಕೋ' ಎಂದೆಲ್ಲಾ ಅಂದಿನ ಊಟದ ಬಗ್ಗೆ ವಿವರವಾಗಿ ಹೇಳಿ ಕಳುಹಿಸುತ್ತಿದ್ದಳು.

ಆವತ್ತು ಸೋಮವಾರ. ನಾನು ಮಧ್ಯಾಹ್ನ ಕಾಲೇಜು ಮುಗಿದ ಬಳಿಕ ಎಂದಿನಂತೆ ನಮ್ಮ ಅಂಗಡಿಯ ಬಳಿ ಹೋದೆ. ಅಂಗಡಿಯ ಬಾಗಿಲು ಬೀಗ ಹಾಕಿದ್ದನ್ನು ಕಂಡು ಕೊಂಚ ದಿಗಿಲಾಯಿತು. ಪಕ್ಕದಲ್ಲಿದ್ದ ಸೇಠೂವಿನ ಬಟ್ಟೆ ಅಂಗಡಿಯಲ್ಲಿ ಕೇಳಿದೆ. ಅಲ್ಲಿ ಕುಳಿತಿದ್ದ ಸೇಠೂವಿನ ಮಗ ನಮ್ಮ ಮನೆಯ ಬೀಗದ ಕೈಯ್ಯನ್ನು ಕೊಟ್ಟು 'ನಿಮ್ಮ ತಂದೆಗೆ ಹುಷಾರಿಲ್ಲ.. ನಿಮ್ಮ ತಾಯಿ ಅವರನ್ನು ಗವರ್ನಮೆಂಟ್ ಆಸ್ಪತ್ರೆಗೆ ಕರೆದುಕೊಂಡು ಹೋದರು..' ಎಂದಿದ್ದನ್ನು ಕೇಳಿಯೇ ನನಗೆ ಅತೀವ ಗಾಬರಿಯಾಯಿತು.. ನಾನು ಕಂಡಂತೆ ನನ್ನ ಅಪ್ಪ ಎಂದೂ ಹುಷಾರು ತಪ್ಪಿದವರಲ್ಲ. ಎಂದಾದರೊಂದು ದಿನ ನೆಗಡಿಯೋ, ಕೆಮ್ಮೋ, ಜ್ವರವೋ ಬಂದರೆ ಅವರೇ ಡಾಕ್ಟರ ಶಾಪಿಗೆ ಹೋಗಿಬರುತ್ತಿದ್ದರು. ಬೆಳಿಗ್ಗೆ ಚೆನ್ನಾಗಿಯೇ ಇದ್ದರಲ್ಲಾ.. ಇಲ್ಲಿಂದಲೇ ಆಸ್ಪತ್ರೆಗೆ ಹೋಗುವಂತಾದ್ದು ಏನಾಯಿತೋ.. ಎಂದುಕೊಂಡು ನನ್ನ ಕೈಕಾಲು ನಡುಗತೊಡಗಿದವು.

**(ಸಶೇಷ)**